International Theatre Institute ITI
World Organization for the Performing Arts

Message for World Theatre Day 2025 – 27 March

**ವಿಶ್ವ ರಂಗಭೂಮಿ ದಿನದ ಸಂದೇಶ – 27 ಮಾರ್ಚ್ 2025**

*ಸಂದೇಶ ನೀಡಿರುವವರು – ಥಿಯೋಡೊರೊಸ್ ಟೆರ್ಜೊಪೊಲೊಸ್, ಗ್ರೀಸ್*

*ರಂಗ ನಿರ್ದೇಶಕರು, ಶಿಕ್ಷಕರು, ಲೇಖಕರು, ಅಟ್ಟಿಸ್ ರಂಗ ಸಂಸ್ಥೆಯ ಸ್ಥಾಪಕರು ಹಾಗೂ ಕಲಾ ನಿರ್ದೇಶಕರು, ರಂಗ ಒಲಿಂಪಿಕ್ಸ್‌ನ ಪ್ರೇರಕರು, ಅಂತರರಾಷ್ಟ್ರೀಯ ರಂಗ ಒಲಿಂಪಿಕ್ಸ್ ಮಂಡಲಿಯ ಮುಖ್ಯಸ್ಥರು*

ಮಿಥ್ಯಾವಾಸ್ತವದ ಬಂದೀಖಾನೆಯಲ್ಲಿ ಬಂದಿಯಾಗಿ, ಉಸಿರುಗಟ್ಟಿಸುವ ವೈಯಕ್ತಿಕತೆಯಲ್ಲಿ ಸಿಕ್ಕಿಕೊಂಡು ಬಡವಾಗಿಹೋಗಿರುವ ಮಂದಿಯ ಈ ಜಗತ್ತಿನಲ್ಲಿ, ಈ ನಮ್ಮ ವಸ್ತುಸ್ಥಿತಿ ಕಳುಹಿಸುತ್ತಿರುವ ತುರ್ತುಕರೆಗೆ ರಂಗಭೂಮಿ ಸ್ಪಂದಿಸೀತೇ? ನಿಯಂತ್ರಣ, ದಮನಗಳ ಸರ್ವಾಧಿಕಾರಿ ವ್ಯವಸ್ಥೆಯೊಳಗಿನ ಯಾಂತ್ರಿಕ ಅಸ್ತಿತ್ವಗಳ ಈ ಜಗತ್ತಿನಲ್ಲಿ?

ನಿಸರ್ಗನಾಶ, ಜಾಗತಿಕ ತಾಪದ ಹೆಚ್ಚಳ, ಬೃಹತ್ ಪ್ರಮಾಣದಲ್ಲಿ ಜೀವವೈವಿಧ್ಯದ ನಾಶ, ಸಾಗರ ಮಾಲಿನ್ಯ, ಕರಗುತ್ತಿರುವ ಹಿಮಗಡ್ಡೆಗಳು, ಹೆಚ್ಚುತ್ತಿರುವ ಕಾಡ್ಗಿಚ್ಚು, ಹವಾಮಾನ ವೈಪರೀತ್ಯ – ಇವುಗಳ ಬಗ್ಗೆ ರಂಗಭೂಮಿಗೆ ಕಾಳಜಿ ಇದೆಯೇ? ರಂಗಭೂಮಿಯು ಪರಿಸರ ವ್ಯವಸ್ಥೆಯ ಕ್ರಿಯಾಶೀಲ ಅಂಶವಾಗಬಲ್ಲದೇ? ಹಲವು ವರ್ಷಗಳಿಂದ ಭೂಮಂಡಲದ ಮೇಲೆ ಮಾನವನಿಂದಾಗುತ್ತಿರುವ ಆಘಾತಗಳಿಗೆ ರಂಗಭೂಮಿ ಸಾಕ್ಷಿಯಾಗಿದೆ, ಆದರೆ ಈ ತೊಂದರೆಯನ್ನು ನಿಭಾಯಿಸುವುದು ಅದಕ್ಕೆ ಕಷ್ಟವಾಗಿದೆ.

ರಾಜಕೀಯ ಹಾಗೂ ಆರ್ಥಿಕ ಆಸಕ್ತಿಗಳು, ವಾರ್ತಾಜಾಲ ಹಾಗೂ ಅಭಿಪ್ರಾಯ ನಿರ್ಮಿಸುವ ಸಂಸ್ಥೆಗಳು ಜನಸಾಮಾನ್ಯನ ಮನಃಸ್ಥಿತಿಯನ್ನು ಬದಲಿಸುತ್ತಿವೆ; ಸಾಮಾಜಿಕ ಜಾಲತಾಣಗಳು ಪರಸ್ಪರ ಸಂವಹನಕ್ಕೆ ಎಡೆಮಾಡಿಕೊಡುತ್ತಿವೆಯಾದರೂ, ಪರಸ್ಪರ ದೂರವನ್ನು ಕಾಯ್ದುಕೊಳ್ಳುವ ಸೌಲಭ್ಯವನ್ನೊದಗಿಸಿ, ಸಂವಹನ ಇಲ್ಲದಿರುವುದಕ್ಕೆ ನೆಪವನ್ನೂ ಒಡ್ಡುತ್ತಿವೆ; ಆ ಅನ್ಯನ, ಆ ಬೇರೆಯವನ, ಆಗಂತುಕನ ಭಯ ಸರ್ವವ್ಯಾಪಿಯಾಗಿ ನಮ್ಮನ್ನು ಕಾಡುತ್ತಾ ನಮ್ಮೆಲ್ಲ ಆಲೋಚನೆ, ಕ್ರಿಯೆಗಳಲ್ಲೂ ಎದ್ದು ತೋರುತ್ತಿದೆ. 21ನೆಯ ಶತಮಾನದಲ್ಲಿ ರೂಪುಗೊಳ್ಳುತ್ತಿರುವ ಇಂತಹ ಮಾನವ ಸ್ವರೂಪದ ಬಗ್ಗೆ ರಂಗಭೂಮಿಗೆ ಆತಂಕವಿದೆಯೇ?

ರಕ್ತವುಕ್ಕುತ್ತಿರುವ ಗಾಯವನ್ನು ಪರಿಗಣಿಸದೆಯೇ, ರಂಗಭೂಮಿಯು ಭಿನ್ನತೆಗಳ ಸಹಬಾಳ್ವೆಯನ್ನು ಸಾಧಿಸುವ ಕಾರ್ಯಾಗಾರವಾಗಬಲ್ಲದೇ?

ಈ ರಕ್ತವುಕ್ಕುತ್ತಿರುವ ಗಾಯ, ಕಲ್ಪನೆಯ ಪುನಾರಚನೆಗೆ ನಮ್ಮನ್ನು ಆಹ್ವಾನಿಸುತ್ತದೆ. ಹೈನರ್ ಮುಲ್ಲರ್ ಹೇಳುವಂತೆ, "ಕಲ್ಪನೆಯೆಂಬುದು ಒಂದು ಒಟ್ಟುಮೊತ್ತ; ಬೇರೆ ಹೊಸ ಹೊಸ ಯಂತ್ರಗಳನ್ನು ಎಂದೂ ಜೋಡಿಸಬಹುದಾದಂತಹ ಒಂದು ಯಂತ್ರ. ಸಾಂಸ್ಕೃತಿಕ ವಲಯವೇ ಸ್ಫೋಟಿಸುವಂತೆ ಅದರ ವೇಗ ಹೆಚ್ಚುವವರೆಗೂ ಅದು ಶಕ್ತಿಯನ್ನು ಸಂವಹಿಸುತ್ತಲೇ ಹೋಗುತ್ತದೆ." ಇಲ್ಲಿ, ನಾನು ಬರ್ಬರತೆಯ ವಲಯವನ್ನೂ ಸೇರಿಸಬಯಸುತ್ತೇನೆ.

ರಂಗಸ್ಥಳದ ಎಡೆಬೆಳಕು, ತನ್ನ ಮೇಲೆ ತಾನೇ ಬೆಳಕು ಚೆಲ್ಲುತ್ತ ದಾರಿತಪ್ಪಿಸುವ ಬದಲು, ಸಾಮಾಜಿಕ ಘಾತದ ಮೇಲೆ ಬೆಳಕು ಚೆಲ್ಲಬಲ್ಲದೇ?

ಈ ಎಲ್ಲ ಪ್ರಶ್ನೆಗಳು ನಿರ್ಣಾಯಕ ಉತ್ತರಗಳಿಗೆ ಎಡೆಗೊಡುವುದಿಲ್ಲ, ಏಕೆಂದರೆ, ರಂಗಭೂಮಿ ಇರುವುದು, ಸಲ್ಲುವುದು ಉತ್ತರವಿರದ ಪ್ರಶ್ನೆಗಳ ಬಲದ ಮೇಲೆಯೇ.

ಡಯನೈಸಸ್ ಹುಟ್ಟುಹಾಕಿದ ಪ್ರಶ್ನೆಗಳು, ಇಂದು, ವಿಶ್ವ ರಂಗಭೂಮಿ ದಿನದಂದು, ಪುರಾತನ ರಂಗಭೂಮಿ ಮೇಳೈಸಿದ್ದ ಆತನ ಜನ್ಮಸ್ಥಳವನ್ನು ಹಾದು, ಶರಣಾರ್ಥಿಯಾದ ಆತನ ಏಕಾಂತ ಪಯಣವನ್ನು, ಯುದ್ಧತಪ್ತ ನಾಡುಗಳಲ್ಲಿ ಮುಂದುವರಿಸುತ್ತಿದೆ.

ಡಯನೈಸಸ್, ಭೂತ–ವರ್ತಮಾನ–ಭವಿಷ್ಯಗಳನ್ನು ಒಂದುಗೂಡಿಸುವ, ರಂಗಭೂಮಿ ಹಾಗೂ ಕಲ್ಪನೆಗಳನ್ನು ಪ್ರತಿನಿಧಿಸುವ ಹರ್ಷೋನ್ಮತ್ತ ದೇವತೆ; ಝ್ಯೂಸ್ ಹಾಗೂ ಸೆಮಲಿಯ ಮೂಲಕ ಎರಡು ಹುಟ್ಟುಗಳನ್ನು ಕಂಡ ಮಗು; ಅನಿಶ್ಚಿತ ಅಸ್ಮಿತೆಗಳನ್ನು ಅಭಿವ್ಯಕ್ತಿಸುವವ; ಸ್ತ್ರೀ–ಪುರುಷ, ದೈವಿಕ–ಮೃಗೀಯ; ತರ್ಕ–ಹುಚ್ಚುಗಳ, ಕ್ರಮ–ಗೊಂದಲಗಳಲ್ಲಿರುವವ, ಬಾಳ್ವೆ–ಸಾವುಗಳ ಸೀಮಾರೇಖೆಯ ಮೇಲೆ ಆಟವಾಡುವ ದೊಂಬರವ; ನಾವು ಆತನ ಕಣ್ಣುಗಳೊಳಗೆ ಇಣುಕಿ ನೋಡೋಣ. ಡಯನೈಸಸ್ ಮೂಲಭೂತವಾದ ತಾತ್ತ್ವಿಕ ಪ್ರಶ್ನೆಯೊಂದನ್ನು ಕೇಳುತ್ತಾನೆ – "ಈ ಎಲ್ಲದರ ಅರ್ಥವೇನು?"; ಕಲ್ಪನೆಯ ಮೂಲವನ್ನೂ ಮಾನವತೆಯ ಗೂಢತೆಯನ್ನೂ ಆಳವಾಗಿ ಶೋಧಿಸುವಂತೆ ಕರ್ತೃವನ್ನು ಪ್ರೇರಿಸುವ ಪ್ರಶ್ನೆಯಿದು.

ಸಂಸ್ಮರಣೀಯವಾದ, ಹೊಸ ನೈತಿಕ–ರಾಜಕೀಯ ಹೊಣೆಗಾರಿಕೆಯನ್ನು ರೂಪಿಸುವ ನೂತನ ಕಥನತಂತ್ರಗಳು, ಈಗಿನ 'ಮಧ್ಯಕಾಲೀನ' ಬಹುಮುಖ ಸರ್ವಾಧಿಕಾರಿತ್ವದಿಂದ ಹೊರಹೊಮ್ಮುವ ಅಗತ್ಯವಿದೆ.

– ಥಿಯೋಡೊರೊಸ್ ಟೆರ್ಜೊಪೊಲೊಸ್

**ಅನುವಾದ: ರಶ್ಮಿ ವಿನಯ್, ಬೆಂಗಳೂರು**

**(ಶ್ರೀಕಂಠ ಗುಂಡಪ್ಪ ಅವರ ನೆನಪಿನಲ್ಲಿ)**